



## ಜಾವೇದ್–ಕಂಗನಾ ಪ್ರಕರಣ

ನಟಿ ಕಂಗನಾ ರನೋಟ್ ಸಾಮಾಜಿಕ ಜಾಲತಾಣದಲ್ಲಿ ಅನಿಸಿದ್ದನ್ನು ತಕ್ಷಣವೇ ಪೋಸ್ಟ್ ಮಾಡುವವರ ಪೈಕಿ. ಅವರು ಖುದ್ದು ಟ್ರೋಲರ್. ಎಂಥವರನ್ನೂ ಕೆಣಕಿ ಎದುರು ಹಾಕಿಕೊಳ್ಳುವುದಕ್ಕೆ ಅವರು ಹಿಂಜರಿಯುವುದಿಲ್ಲ. ಟ್ರೋಲ್‌ನ ಪರಿಧಿಯಿಂದ ಆಚೆಗೂ ಅವರು ಪ್ರಶ್ನಿಸಿದವರ ಪಟ್ಟಿ ದೊಡ್ಡದಿದೆ. ಚಿತ್ರಸಾಹಿತಿ ಜಾವೇದ್ ಅಖ್ತರ್ ಈ ನಟಿಯನ್ನು ಪರಿಚಯಸ್ಥರೊಬ್ಬರ ಮೂಲಕ ಮನೆಗೆ ಕರೆಸಿಕೊಂಡಿದ್ದರು. ಆಗ ಹೃತಿಕ್ ರೋಷನ್ ವಿಷಯದಲ್ಲಿ ಕಂಗನಾ ಟೀಕೆಗಳನ್ನು ಮಾಡಿದ್ದರು. ಜಾವೇದ್ ಅಖ್ತರ್ ಆ ದಿನ ತಮಗೆ ಬೆದರಿಕೆ ಒಡ್ಡಿದ್ದರೆಂದು ಕಂಗನಾ ಬಹಳ ಕಾಲದ ನಂತರ ಹೇಳಿದರು. ಹೃತಿಕ್ ದೊಡ್ಡ ಕುಟುಂಬದವರು. ಅವರನ್ನು ಎದುರು ಹಾಕಿಕೊಂಡರೆ ಕಷ್ಟವಾಗುತ್ತದೆ ಎಂಬರ್ಥದ ಎಚ್ಚರಿಕೆ ನೀಡಿದ್ದರೆಂಬ ಕಂಗನಾ ಮಾತನ್ನು ಜಾವೇದ್ ಅಲ್ಲಗಳೆದರು. ಅಷ್ಟೇ ಅಲ್ಲದೆ ಮಾನನಷ್ಟ ಮೊಕದ್ದಮೆ ಹೂಡಿದರು. ನ್ಯಾಯಾಲಯವು ಈ ಪ್ರಕರಣದಲ್ಲಿ ಜಾವೇದ್ ಅವರ ಹೇಳಿಕೆಯನ್ನು ಇತ್ತೀಚೆಗೆ ವಿಚಾರಣೆ ನಡೆಸಿ, ದಾಖಲಿಸಿಕೊಂಡಿದೆ.

ಕೇಂದ್ರೀಕರಿಸಲು ಸಾಧ್ಯವಾಯಿತು ಎಂದು ದೀಪಿಕಾ ಹೇಳಿಕೊಂಡಿದ್ದಾರೆ.

‘ಹಾರ್ಪರ್ಸ್ ಬಜಾರ್’ ವರದಿಗಾರ ಅಮೆರಿಕ ಓಪನ್ ಟೆನಿಸ್ ಪಂದ್ಯಗಳು ನಡೆಯುವ ಮುನ್ನ ಸೆರೆನಾ ವಿಲಿಯಮ್ಸ್ ಅವರ ಸುದೀರ್ಘ ಸಂದರ್ಶನ ಮಾಡಿದ್ದರು. ಅದರಲ್ಲಿ ಅವರ ಫ್ಯಾಷನ್ ಸ್ಟೇಟ್‌ಮೆಂಟ್, ತೊಡುವ ಬಟ್ಟೆ, ದೇಹಾಕಾರದ ಬಗೆ, ಹೀಗೆ ಹಲವು ಕೆಣಕುವ ಪ್ರಶ್ನೆಗಳನ್ನು ಕೇಳಿದ್ದರು. ಆ ಸಂದರ್ಶನ ಪ್ರಕಟವಾದ ನಂತರ ಸೆರೆನಾ, ‘ಕ್ವೀನ್. ಡೋಂಟ್ ಬಿ ಅಫ್ರೈಡ್ ಟು ರೂಲ್ ಲೈಕ್ ಎ ಕಿಂಗ್’ ಎಂಬ ಒಕ್ಕಣೆ ಬರೆದಿದ್ದ ಬಟ್ಟೆ ಧರಿಸಿ ಟೆನಿಸ್ ಅಭ್ಯಾಸ ನಡೆಸಿದ್ದರು. ಟ್ರೋಲರ್‌ಗಳಿಗೆಲ್ಲ ತಾವು ಕೊಟ್ಟ ಉತ್ತರ ಅದಾಗಿತ್ತೆಂದೂ ಅವರು ಆಮೇಲೆ ಹೇಳಿದ್ದರು.

ಕೆ.ಎಲ್. ರಾಹುಲ್ ಈಗ ಮೊದಲಿನ ಫಾರ್ಮ್‌ನಲ್ಲಿ ಇಲ್ಲ. ಇಂತಹ ಸ್ಥಿತಿಯಲ್ಲಿ ಆಟದ ಸುಧಾರಣೆ ಸಹಜವಾಗಿಯೇ ಅವರ ಆದ್ಯತೆಯಾಗಿರುತ್ತದೆ. ಅದೇ ಹೊತ್ತಿನಲ್ಲಿ ಅತಿಯಾ ಶೆಟ್ಟಿ ಹಾಗೂ ಅವರ ನಡುವಿನ ಪ್ರೇಮ ಸಂಬಂಧಕ್ಕೆ ಅರ್ಥ ಸಂದಿದೆ. ಅವರ ಖಾಸಗಿ ಬದುಕು ಹಾಗೂ ಕ್ರಿಕೆಟ್ಟನ್ನು ಸಮೀಕರಿಸಿ ಟ್ರೋಲ್‌ಗಳನ್ನು ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಇದನ್ನು ನಿಭಾಯಿಸುವುದು ಕೂಡ ರಾಹುಲ್ ವೃತ್ತಿ ಬದುಕಿನ ಭಾಗವಾಗಬೇಕಷ್ಟೆ.

ಇತ್ತೀಚೆಗೆ ತಮಗಿಂತ ಚಿಕ್ಕ ಪ್ರಾಯದ ರುಪಾಲಿ ಬರುವಾ ಎಂಬ ಉದ್ಯಮಿಯನ್ನು ನಟ ಆಶಿಶ್ ವಿದ್ಯಾರ್ಥಿ ಮದುವೆಯಾದರು. ನಟಿ ಶಕುಂತಲಾ ಬರುವಾ ಪುತ್ರಿ ರಾಜೋಶಿ ಬರುವಾ ಆಶಿಶ್ ಅವರ ಮೊದಲ ಪತ್ನಿ. ಎರಡು ವರ್ಷಗಳ ಹಿಂದೆ ಆ ಮದುವೆಯಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಅವರಿಬ್ಬರಿಗೂ ಅರ್ಥ್ ವಿದ್ಯಾರ್ಥಿ ಎಂಬ 22 ವರ್ಷದ ಮಗ ಇದ್ದಾನೆ. ಆಶಿಶ್ ಅವರಿಗೀಗ 55 ವರ್ಷ ವಯಸ್ಸು. ಅವರು ಚಿತ್ರೀಕರಣಕ್ಕೆಂದು ಹೋದೆಡೆಯೆಲ್ಲ ಸುಮ್ಮನೆ ಇರದೆ ಸಣ್ಣ ಪುಟ್ಟ ವಿಡಿಯೊಗಳನ್ನು ಮಾಡಿ, ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುವ ಹವ್ಯಾಸ ಇಟ್ಟುಕೊಂಡಿದ್ದಾರೆ. ಅದರಲ್ಲೂ ಅವರ ಫುಡ್ ವ್ಲಾಗ್‌ಗಳಿಗೆ ದೊಡ್ಡ ಸಂಖ್ಯೆಯ ನೋಡುಗರಿದ್ದಾರೆ. ಅವರು ಎರಡನೇ ಮದುವೆ ಆದದ್ದೇ ಅನೇಕರು ಟ್ರೋಲ್ ಮಾಡಿದರು. ಕೆಲವರು ‘ಮುದುಕನಿಗೆ ಈಗ ಮದುವೆ ಬೇಕಿತ್ತಾ’ ಎಂದೆಲ್ಲ ಲಘುವಾಗಿ ಪ್ರಶ್ನಿಸಿದರು. ಸಾಮಾಜಿಕ ಜಾಲತಾಣದಲ್ಲಿ ಮುಳುಗೇಳುವ ಆಶಿಶ್ ವಿದ್ಯಾರ್ಥಿ, ಇವನ್ನೆಲ್ಲ ಓದಿದ ಮೇಲೆ ಮಾಧ್ಯಮದ ಮೂಲಕವೇ ಸುದೀರ್ಘ ಪ್ರತಿಕ್ರಿಯೆ ನೀಡಿದರು. ಅದರ ಸಾರಾಂಶ ಹೀಗಿದೆ: ‘‘ಮುದುಕನಿಗೆ ಇವೆಲ್ಲ ಬೇಕಿತ್ತಾ ಎನ್ನುವುದು ಚಿಕ್ಕ ವಯಸ್ಸಿನವರು ದೊಡ್ಡವರನ್ನು ಉದ್ದೇಶಿಸಿ ಸಹಜವಾಗಿಯೇ ನೀಡುವ ಬೀಸು ಹೇಳಿಕೆ. ನಮಗೆಲ್ಲರಿಗೂ ವಯಸ್ಸಾಗುತ್ತದೆ. ಹಾಗಂತ ನೋವಿನಲ್ಲೇ ಸಾಯಬೇಕಾಗಿಲ್ಲ. ನನಗೆ ಸಂಗಾತಿ ಬೇಕು ಎನಿಸಿದೆ. ಅದಕ್ಕೇ ಮದುವೆ ಆದೆ. ನನ್ನ ಹಾಗೂ ಮೊದಲ ಪತ್ನಿಯ ದಾರಿಗಳು ಭಿನ್ನವಾಗಿದ್ದವು. ಹೀಗಾಗಿಯೇ ಅಭಿಪ್ರಾಯ ಭೇದ ಇತ್ತು. ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಂಡು ಇನ್ನಷ್ಟು ಕಾಲ ಜೊತೆಯಾಗಿ ಬದುಕಲು ನಾವಿಬ್ಬರೂ ಯತ್ನಿಸಿದೆವು. ಆಗಲಿಲ್ಲ. ಹೀಗಾಗಿ ಕಾನೂನಾತ್ಮಕವಾಗಿಯೇ ವಿಚ್ಛೇದನ ಪಡೆದೆವು. ಮೊದಲ ಇನಿಂಗ್ಸ್ ಕೊನೆಗೊಂಡಿತು. ಈಗ ನಾನು